# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1628

2) ಸದಸ್ಯರ ಹೆಸರು : ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

3) ಉತ್ತರಿಸಬೇಕಾದ ದಿನಾಂಕ : 18-03-2026

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ಮೀನುಗಾರಿಕೆ ಇಲಾಖೆಯ ಮುಖಾಂತರ ಕೊಡಗು ಜಿಲ್ಲೆಗೆ ಮಂಜೂರಾದ ಹಾಗೂ ವಿನಿಯೋಗಿಸಿದ ಅನುದಾನವೆಷ್ಟು; ಕಾಮಗಾರಿವಾರು ವಿವರ ನೀಡುವುದು; | ಕಳೆದ 3 ವರ್ಷಗಳಲ್ಲಿ ಮೀನುಗಾರಿಕೆ ಇಲಾಖೆಯ ಮುಖಾಂತರ ಕೊಡಗು ಜಿಲ್ಲೆಗೆ ಮಂಜೂರಾದ ಹಾಗೂ ವಿನಿಯೋಗಿಸಿದ ಅನುದಾನ ಮತ್ತು ಕಾಮಗಾರಿವಾರು ವಿವರಗಳನ್ನು **<u>ಅನುಬಂಧ - 1</u>** ರಲ್ಲಿ ಒದಗಿಸಲಾಗಿದೆ. |
| ಆ) | ಮೀನುಗಾರಿಕೆ ಇಲಾಖೆಯಲ್ಲಿರುವ ಯೋಜನೆಗಳಾವುವು; ಈ ಯೋಜನೆಗಳನ್ನು ಪಡೆಯಲು ಇರುವ ಮಾನದಂಡಗಳೇನು; ಯೋಜನೆಗಳ ಮಾಹಿತಿಯನ್ನು ನೀಡುವುದು? | ಮೀನುಗಾರಿಕೆ ಇಲಾಖೆಯಲ್ಲಿರುವ ಫಲಾನುಭವಿ ಆಧಾರಿತ ಯೋಜನೆಗಳು ಹಾಗೂ ಈ ಯೋಜನೆಗಳನ್ನು ಪಡೆಯಲು ಇರುವ ಮಾನದಂಡಗಳ ಮಾಹಿತಿಯನ್ನು **<u>ಅನುಬಂಧ - 2</u>** ರಲ್ಲಿ ಒದಗಿಸಲಾಗಿದೆ. |

ಸಂಖ್ಯೆ: ಪಸಂಮೀ ಇ-68 ಮೀಇಯೋ 2026

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) ರವರ
ಚುಕ್ಕೆ ಗುರುತಿಲ್ಲದ ಪ್ರ.ಸಂ. 1628 ರ ಅನುಬಂಧ-1

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ: 1628 ರ (ಅ) ಪ್ರಶ್ನೆಗೆ ಉತ್ತರ
(ಕಾಮಗಾರಿಗಳ ವಿವರ )

| 2022-23 ಕಟ್ಟಡಗಳು ಲೆಕ್ಕ ಶೀರ್ಷಿಕೆ (2405-00-101-0-27 ಜಿ.ಪಂ) ವೆಚ್ಚದ ಬಗ್ಗೆ | | | | (ರೂ. ಲಕ್ಷಗಳಲ್ಲಿ) | |
|---|---|---|---|---|---|
| ಕ್ರ.ಸಂ. | ಕಾಮಗಾರಿಯ ವಿವರ | ಕಾಮಗಾರಿಯ ಸ್ಥಳ | ಬಿಡುಗಡೆ | ಒಟ್ಟು ವೆಚ್ಚ | ಷರಾ |
| 1 | ಮೀನುಗಾರಿಕೆ ಸಹಾಯಕ ನಿರ್ದೇಶಕರು ಕಚೇರಿ ಮಡಿಕೇರಿ ಕಚೇರಿಯ ಮೇಲ ರೂಫ್ ಶೀಟಿಂಗ್ ಹಾಗೂ ಕ್ಲಾಡಿಂಗ್ ಕಾಮಗಾರಿ ಮತ್ತು ನೂತನ ಕೊಳವೆ ಬಾವಿ ನಿರ್ಮಾಣ, ಪಂಪ್ಸೆಟ್, ವಿದ್ಯುತ್ ಸಂಪರ್ಕ ಮತ್ತು ಪೈಪ್ ಲೈನ್ ದುರಸ್ಥಿ | ಮೀನುಗಾರಿಕೆ ಸಹಾಯಕ ನಿರ್ದೇಶಕರು ಕಚೇರಿ ಮಡಿಕೇರಿ ಕೊಡಗು ಜಿಲ್ಲೆ | 7.00 | 6.58 | |
| 2 | ಮೀನುಗಾರಿಕೆ ಸಹಾಯಕ ನಿರ್ದೇಶಕರು ಕಚೇರಿ ಪೊನ್ನಂಪೇಟೆ ಆಡಳಿತ ಕಚೇರಿಯ ಪೇಂಟಿಂಗ್ ಹಾಗೂ ಕಂಪೌಂಡ್ ಗೋಡೆಯ ಪೇಂಟಿಂಗ್ | ಮೀನುಗಾರಿಕೆ ಸಹಾಯಕ ನಿರ್ದೇಶಕರು ಕಚೇರಿ ಪೊನ್ನಂಪೇಟೆ, ಕೊಡಗು ಜಿಲ್ಲೆ | 2.00 | 1.997 | |
| 3 | ಸೋಮವಾರಪೇಟೆ ತಾಲ್ಲೂಕಿನ ಹಾರಂಗಿ ಮೀನುಮರಿ ಉತ್ಪದನಾ ಹಾಗೂ ಪಾಲನ ಕೇಂದ್ರದ ಪ್ಯಾಕಿಂಗ್ ಶೆಡ್ ಹಿಂಭಾಗದ 11 ಕೊಳಗಳ ದುರಸ್ಥಿ,ಫೋಟ್ಸ್‌ಇಗಳಿಗೆ ಚರಂಡಿ ವ್ಯವಸ್ಥೆ ಹಾಗೂ ಡ್ರೈನೇಜ್ ಮತ್ತು ಫಿಲ್ಟ್ರೇಶನ್ ಚೆಂಬರ್ ದುರಸ್ಥಿ/ ಮೀನುಮರಿ ಕೇಂದ್ರದ ವಿದ್ಯುತೀಕರಣ | ಸೋಮವಾರಪೇಟೆ ತಾಲ್ಲೂಕಿನ ಹಾರಂಗಿ ಮೀನುಮರಿ ಉತ್ಪದನಾ ಮತ್ತು ಪಾಲನ ಕೇಂದ್ರ, ಕೊಡಗು ಜಿಲ್ಲೆ | 14.00 | 10.46 | |
| 4 | ಮೀನುಗಾರಿಕೆ ಸಹಾಯಕ ನಿರ್ದೇಶಕರು ಕಚೇರಿ ಸೋಮವಾರಪೇಟೆ ಕಚೇರಿಯಲ್ಲಿನ ಮೀನು ಪಾಲನ ಕೊಳಗಳಿಗೆ ನೀರು ಹಾಯಿಸುವ ಮೋಟಾರ್ ದುರಸ್ಥಿ, ಮಣ್ಣಿನ ಪಾಲನ ಕೊಳಗಳ ಗೋಡೆಯ ಎತ್ತರ ಹೆಚ್ಚಿಸುವುದು, ಮಸಿದಿ ಬಳಿ ಇರುವ ತಡೆಗೋಡೆಗೆ RCC Retaining | ಮೀನುಗಾರಿಕೆ ಸಹಾಯಕ ನಿರ್ದೇಶಕರು ಕಚೇರಿ ಸೋಮವಾರಪೇಟೆ ಕೊಡಗು ಜಿಲ್ಲೆ | 7.00 | 4.56 | |
| | | ಒಟ್ಟು | 30.00 | 23.597 | |

**2023-24 ಕಟ್ಟಡಗಳು ಲೆಕ್ಕ ಶೀರ್ಷಿಕೆ (2405-00-101-0-27 ಜಿ.ಪಂ) ವೆಚ್ಚದ ಬಗ್ಗೆ**

| ಕ್ರ.ಸಂ. | ಕಾಮಗಾರಿಯ ವಿವರ | ಕಾಮಗಾರಿಯ ಸ್ಥಳ | ಬಿಡುಗಡೆ | ಒಟ್ಟು ವೆಚ್ಚ | ಷರಾ |
|---|---|---|---|---|---|
| 1 | ಸೋಮವಾರಪೇಟೆ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು ಸೋಮವಾರಪೇಟೆ ಕಛೇರಿಯ ಪಾಲನಾ ಕೇಂದ್ರದ ಕೊಳಗಳ ದುರಸ್ಥಿ, ಮಸೀದಿ ಸಮೀಪದ ಕೊಳಕ್ಕೆ ಔಟ್ ಲೆಟ್ ಚೇಂಬರ್ ನಿರ್ಮಾಣ ಕಛೇರಿಯ 1 ಕೊಠಡಿಗೆ ಟೈಲ್ಸ್ ಅಳವಡಿಸಿ ಪೈಂಟಿಂಗ್ ಮಾಡುವುದು ಹಾಗೂ | ಮೀನುಗಾರಿಕೆ ಸಹಾಯಕ ನಿರ್ದೇಶಕರು ಸೋಮವಾರಪೇಟೆ | 4.00 | 0.00 | ಪಿ.ಆರ್. ಇ.ಡಿ ಮಡಿಕೇರಿ ರವರಿಂದ ಪಾವತಿಸಲು ವಿಳಂಭಗೊಂಡಿರುತ್ತದೆ |
| 2 | ಸೋಮವಾರಪೇಟೆ ತಾಲ್ಲೂಕಿನ ಹಾರಂಗಿ ಮೀನುಮರಿ ಉತ್ಪಾದನಾ ಹಾಗೂ ಪಾಲನಾ ಕೇಂದ್ರದಲ್ಲಿರುವ ಸಿಬ್ಬಂದಿಗಳ ವಸತಿ ಗೃಹಗಳ ದುರಸ್ಥಿ | ಮೀನುಗಾರಿಕೆ ಸಹಾಯಕ ನಿರ್ದೇಶಕರು ,ಹಾರಂಗಿ ಮೀನುಮರಿ ಉತ್ಪಾದನಾ ಹಾಗೂ ಪಾಲನಾ ಕೇಂದ್ರ | 6.00 | 4.40 | |
| 3 | ಮೀನುಗಾರಿಕೆ ಉಪ ನಿರ್ದೇಶಕರು ಮಡಿಕೇರಿ ಕಛೇರಿಯ ಅಧಿಕಾರಿಯ ಕೊಠಡಿಯಲ್ಲಿ ಪ್ಲೋಡ್ ರೋಂನಲ್ಲಿ ಫೈಲ್ ಗಳನ್ನು ಇಡಲು ಕಪಾಟು ನಿರ್ಮಾಣ ಮತ್ತು ಕಛೇರಿಯ ಹಿಂಭಾಗದಲ್ಲಿ ಕಾಂಕ್ರೀಟೀಕರಣ | ಮೀನುಗಾರಿಕೆ ಉಪ ನಿರ್ದೇಶಕರು ಮಡಿಕೇರಿ | 5.00 | 4.99 | |
| 4 | ಮೀನುಗಾರಿಕೆ ಸಹಾಯಕ ನಿರ್ದೇಶಕರು ಮಡಿಕೇರಿಯ ಕಛೇರಿಯ ಫೈಲ್‌ಗಳನ್ನು ಇಡಲು ಕಪಾಟು ನಿರ್ಮಾಣ, ಕಛೇರಿಯ ಮೇಲ್ಛಾವಣಿಯಲ್ಲಿ ಗೋಡೆ ಕಟ್ಟುವುದು ,ನೆಲಕ್ಕೆ ಟೈಲ್ಸ್ ಅಳವಡಿಕೆ, ಕಛೇರಿ ಹಿಂಭಾಗ ಮತ್ತು ಸುತ್ತ ಮುತ್ತ ಕಾಂಕ್ರೀಟ್ ಹಾಸಿಗೆ ಮತ್ತು ಮೀನುಮರಿ ಪಾಲನಾ ಕೊಳದ ದುರಸ್ಥಿ | ಮೀನುಗಾರಿಕೆ ಸಹಾಯಕ ನಿರ್ದೇಶಕರು ಮಡಿಕೇರಿ | 7.00 | 6.99 | |
| 5 | ಮೀನುಗಾರಿಕೆ ಸಹಾಯಕ ನಿರ್ದೇಶಕರು ಪೊನ್ನಂಪೇಟೆ ಕಛೇರಿಯ 6 ಮೀನುಮರಿ ಪಾಲನಾ ಕೊಳಗಳಿಗೆ ಪಾಲಿಹೌಸ್ ನಿರ್ಮಾಣ | ಮೀನುಗಾರಿಕೆ ಸಹಾಯಕ ನಿರ್ದೇಶಕರು ಪೊನ್ನಂಪೇಟೆ | 10.00 | 0.00 | ಪಿ.ಆರ್. ಇ.ಡಿ ಮಡಿಕೇರಿ ರವರಿಂದ ಪಾವತಿಸಲು ವಿಳಂಭಗೊಂಡಿರುತ್ತದೆ |
| | ಒಟ್ಟು | | 32.00 | 16.38 | |

**2023-24 ಕಟ್ಟಡಗಳು ಲೆಕ್ಕ ಶೀರ್ಷಿಕೆ (2405-00-101-0-28(090) ಜಿ.ಪಂ) ವೆಚ್ಚದ ಬಗ್ಗೆ**

| ಕ್ರ.ಸಂ. | ಕಾಮಗಾರಿಯ ವಿವರ | ಕಾಮಗಾರಿಯ ಸ್ಥಳ | ಬಿಡುಗಡೆ | ಒಟ್ಟು ವೆಚ್ಚ | ಷರಾ |
|---|---|---|---|---|---|
| | ಸೋಮವಾರಪೇಟೆ ಮೀನುಮರಿ ಪಾಲನಾ ಕೊಳಗಳ ದುರಸ್ಥಿ ಮತ್ತು ವಾಟರ್ ಪ್ರೂಫಿಂಗ್ | ಮೀನುಗಾರಿಕೆ ಸಹಾಯಕ ನಿರ್ದೇಶಕರು ಸೋಮವಾರಪೇಟೆ | 2.00 | 2.00 | |

**2024-25 ಕಟ್ಟಡಗಳು ಲೆಕ್ಕ ಶೀರ್ಷಿಕೆ (2405-00-101-0-27 ಜಿ.ಪಂ) ವೆಚ್ಚದ ಬಗ್ಗೆ**

| ಕ್ರ.ಸಂ. | ಕಾಮಗಾರಿಯ ವಿವರ | ಕಾಮಗಾರಿಯ ಸ್ಥಳ | ಬಿಡುಗಡೆ | ಒಟ್ಟು ವೆಚ್ಚ | ಷರಾ |
|---|---|---|---|---|---|
| 1 | ಸೋಮವಾರಪೇಟೆ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು ಸೋಮವಾರಪೇಟೆ ಕಛೇರಿಯ ಪಾಲನಾ ಕೇಂದ್ರದ ಹಳೆಯ ಕಛೇರಿ ಕಟ್ಟಡ ದುರಸ್ಥಿ | ಮೀನುಗಾರಿಕೆ ಸಹಾಯಕ ನಿರ್ದೇಶಕರು ಸೋಮವಾರಪೇಟೆ | 5.10 | 4.02016 | |
| 2 | ಸೋಮವಾರಪೇಟೆ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು ಸೋಮವಾರಪೇಟೆ ಕಛೇರಿಯ ಪಾಲನಾ ಕೇಂದ್ರದ ಕೊಳಗಳ ದುರಸ್ಥಿ, ಮಸೀದಿ ಸಮೀಪದ ಕೊಳಕ್ಕೆ ಔಟ್ ಲೆಟ್ ಚೇಂಬರ್ ನಿರ್ಮಾಣ ಕಛೇರಿಯ 1 ಕೊಠಡಿಗೆ ಟೈಲ್ಸ್ ಅಳವಡಿಸಿ ಪೈಂಟಿಂಗ್ | | 4.00 | 3.9837 | 2023-24 ನೇ ಸಾಲಿನ ಕಾಮಗಾರಿ |
| 2 | ಕುಶಾಲನಗರ ತಾಲ್ಲೂಕಿನ ಹಾರಂಗಿ ಮೀನುಮರಿ ಉತ್ಪಾದನಾ ಹಾಗೂ ಪಾಲನಾ ಕೇಂದ್ರದA ವಸತಿ ಗೃಹಗಳ ದುರಸ್ಥಿ ಮತ್ತು ವಿದ್ಯುತ್ತೀಕರಣ | ಮೀನುಗಾರಿಕೆ ಸಹಾಯಕ ನಿರ್ದೇಶಕರು ,ಹಾರಂಗಿ ಮೀನುಮರಿ ಉತ್ಪಾದನಾ ಹಾಗೂ ಪಾಲನಾ ಕೇಂದ್ರ | 9.40 | 6.944 | |
| 3 | ಮೀನುಗಾರಿಕೆ ಉಪ ನಿರ್ದೇಶಕರು ಮಡಿಕೇರಿ ಕಛೇರಿಯ ರೀವಯರಿಂಗ್, ಮೀನಿಮಮ್ ಬಳಕೆಯ ಮಿತಿಯನ್ನು ಚೆಸ್ಕಾಂ ರವರ ಸಲಹೆಯಂತೆ 1ಕೆವಿ ಯಿಂದ 3.ಕೆವಿ ಗೆ ಮೇಲ್ದರ್ಜೇರಿಸುವುದು, ಕಛೇರಿಯ ಯು.ಪಿ.ಎಸ್ ಅಳವಡಿಸುವುದು 4 ಫ್ಯಾನ್ ಮತ್ತು ಎಲ್.ಇ.ಡಿ ಲೈಟ್ | ಮೀನುಗಾರಿಕೆ ಉಪ ನಿರ್ದೇಶಕರು ಮಡಿಕೇರಿ | 3.35 | 3.33316 | |
| 4 | ಮೀನುಗಾರಿಕೆ ಸಹಾಯಕ ನಿರ್ದೇಶಕರು ಮಡಿಕೇರಿಯ ಕಛೇರಿಯ ಮೇಲೆ ನೂತನವಾಗಿ ನಿರ್ಮಿಸಿರುವ ಸಭಾಂಗಣಕ್ಕೆ ವಿದ್ಯುತ್ತಿಕರಣ, 1ಕವಿ ಯಿಂದ 3.ಕೆವಿ ಗೆ ಮ್ಲೇಲ್ದರ್ಜೇರಿಸುವುದು, ಕಛೇರಿಯ ಯು.ಪಿ.ಎಸ್ ಅಳವಡಿಸುವುದು ಫ್ಯಾನ್ ಮತ್ತು ಎಲ್.ಇ.ಡಿ ಲೈಟ್ ಅಳವಡಿಸುದು. | ಮೀನುಗಾರಿಕೆ ಸಹಾಯಕ ನಿರ್ದೇಶಕರು ಮಡಿಕೇರಿ | 1.65 | 1.63684 | |
| 5 | ಮೀನುಗಾರಿಕೆ ಸಹಾಯಕ ನಿರ್ದೇಶಕರು ಪೊನ್ನಂಪೇಟೆ ಕಛೇರಿಯ 6 ಮೀನುಮರಿ ಪಾಲನಾ ಕೊಳಗಳಿಗೆ ಪಾಲಿಹೌಸ್ ನಿರ್ಮಾಣ | ಮೀನುಗಾರಿಕೆ ಸಹಾಯಕ ನಿರ್ದೇಶಕರು ಪೊನ್ನಂಪೇಟೆ | 8.50 | 8.86810 | 2023-24 ನೇ ಸಾಲಿನ ಕಾಮಗಾರಿ |
| | ಒಟ್ಟು | | **32.00** | **28.78596** | |

**2024-25 ಕಟ್ಟಡಗಳು ಲೆಕ್ಕ ಶೀರ್ಷಿಕೆ (2405-00-101-0-28(090) ಜಿ.ಪಂ) ವೆಚ್ಚದ ಬಗ್ಗೆ**

| ಕ್ರ.ಸಂ. | ಕಾಮಗಾರಿಯ ವಿವರ | ಕಾಮಗಾರಿಯ ಸ್ಥಳ | ಬಿಡುಗಡೆ | ಒಟ್ಟು ವೆಚ್ಚ | ಷರಾ |
|---|---|---|---|---|---|
| | ಸೋಮವಾರಪೇಟೆ ಮೀನುಮರಿ ಪಾಲನಾ ಕೇಂದ್ರದ ಬೋರ್ವೆಲ್ ಪೈಪ್ ಲೈನ್ ದುರಸ್ಥಿ ಮತ್ತು ವಿದ್ಯುತ್ತಿಕರಣ | **ಮೀನುಗಾರಿಕೆ ಸಹಾಯಕ ನಿರ್ದೇಶಕರು ಸೋಮವಾರಪೇಟೆ** | 1.50 | 1.50 | |

| 2025-26 ಕಟ್ಟಡಗಳು ಲೆಕ್ಕ ಶೀರ್ಷಿಕೆ (2405-00-101-0-27 ಜಿ.ಪಂ) ವೆಚ್ಚದ ಬಗ್ಗೆ | | | | | |
|---|---|---|---|---|---|
| ಕ್ರ.ಸಂ. | ಕಾಮಗಾರಿಯ ವಿವರ | ಕಾಮಗಾರಿಯ ಸ್ಥಳ | ಬಿಡುಗಡೆ | ಒಟ್ಟು ವೆಚ್ಚ | ಷರಾ |
| 1 | ಮೀನುಗಾರಿಕೆ ಸಹಾಯಕ ನಿರ್ದೇಶಕರು ಮಡಿಕೇರಿ ಕಛೇರಿಯ ಮೀನು ಕೊಳದ ದುರಸ್ಥಿ ಮತ್ತು ಮುಖ್ಯ ಗೇಟ್ ದುರಸ್ಥಿ | ಮೀನುಗಾರಿಕೆ ಸಹಾಯಕ ನಿರ್ದೇಶಕರು ಮಡಿಕೇರಿ | 1.50 | 1.50 | |
| 2 | ಮೀನುಗಾರಿಕೆ ಸಹಾಯಕ ನಿರ್ದೇಶಕರು ಮಡಿಕೇರಿ ಕಛೇರಿಯ ಸಭಾಂಗಣದ ರೂಫಿಂಗ್ ಮತ್ತು ಸೀಲಿಂಗ್ ದುರಸ್ಥಿ /ಅಭಿವೃದ್ಧಿ ಪಡಿಸುವುದು | ಮೀನುಗಾರಿಕೆ ಸಹಾಯಕ ನಿರ್ದೇಶಕರು ಮಡಿಕೇರಿ | 1.60 | 1.60 | |
| 3 | ಸೋಮವಾರಪೇಟೆ ತಾಲ್ಲುಕಿನ ಹಾನಗಲು ಗ್ರಾ.ಪಂ ಮೀನುಗಾರಿಕೆ ಸಹಾಯಕ ನಿರ್ದೇಶಕರು ಸೋಮವಾರಪೇಟೆ ಕಛೇರಿಯ ಮುಂಭಾಗದ ಒಂದನೇ ಮಣ್ಣಿನ ಕೊಳವನ್ನು ಕಾಂಕ್ರೀಟ್ ಹಾಕಿ ಅಭಿವೃದ್ಧಿ ಹಾಗೂ ಮಸೀದಿ ಸಮೀಪದ ಮೀನುಕೊಳದ ದುರಸ್ಥಿ ಪಡಿಸಲು | ಮೀನುಗಾರಿಕೆ ಸಹಾಯಕ ನಿರ್ದೇಶಕರು ಸೋಮವಾರಪೇಟೆ | 8.50 | 0.00 | |
| 4 | ಸೋಮವಾರಪೇಟೆ ತಾಲ್ಲುಕಿನ ಹಾನಗಲು ಗ್ರಾ.ಪಂ ಮೀನುಗಾರಿಕೆ ಸಹಾಯಕ ನಿರ್ದೇಶಕರು ಸೋಮವಾರಪೇಟೆ ಕಛೇರಿಯ ಮಸೀದಿ ಸಮೀಪದ ಮೀನುಕೊಳದ ದುರಸ್ಥಿ | ಮೀನುಗಾರಿಕೆ ಸಹಾಯಕ ನಿರ್ದೇಶಕರು ಸೋಮವಾರಪೇಟೆ | 4.70 | 4.70 | |
| 5 | ಸೋಮವಾರಪೇಟೆ ತಾಲ್ಲುಕಿನ ಐಗೂರು ಗ್ರಾ.ಪಂ ಹಾರಂಗಿ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರದ ಕೊಳಗಳ ರಿಪೇರಿ ಮತ್ತು ಪೂಪ್ ಲೈನ್ ಅಳವಡಿಸಲು | ಮೀನುಗಾರಿಕೆ ಸಹಾಯಕ ನಿರ್ದೇಶಕರು ,ಹಾರಂಗಿ ಮೀನುಮರಿ ಉತ್ಪಾದನಾ ಹಾಗೂ ಪಾಲನಾ ಕೇಂದ್ರ | 10.53 | 10.53 | |
| 6 | ಸೋಮವಾರಪೇಟೆ ತಾಲ್ಲುಕಿನ ಐಗೂರು ಗ್ರಾ.ಪಂ ಹಾರಂಗಿ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ ಕಛೇರಿಯ ಕಟ್ಟಡ ದುರಸ್ಥಿ | | 2.58 | 2.58 | |
| 7 | ಸೋಮವಾರಪೇಟೆ ತಾಲ್ಲುಕಿನ ಐಗೂರು ಗ್ರಾ.ಪಂ ಹಾರಂಗಿ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರದ ಕೊಳಗಳ ರಿಪೇರಿ ಮತ್ತು ಪೈಪ್ ಲೈನ್ ಕಾಮಗಾರಿ | | 1.19 | 1.19 | |
| 8 | ಸೋಮವಾರಪೇಟೆ ತಾಲ್ಲುಕಿನ ಐಗೂರು ಗ್ರಾ.ಪಂ ಹಾರಂಗಿ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರಕ್ಕೆ ಸೋಲಾರ್ ಸ್ಟ್ರೀಟ್ ಲೈಟ್ ಅಳವಡಿಕೆ ,ಗೇಟುಗಳ ದುರಸ್ಥಿ ಕಾಮಗಾರಿ | | 1.40 | 1.40 | |
| | ಒಟ್ಟು | | 32.00 | 23.50 | |

ಮೀನುಗಾರಿಕೆ ನಿರ್ದೇಶಕರು

07/03/202

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆಂಪಲಕ್ಷ್ಮಿ. ಎ.ಹಿ. (ಸುಳು) ರವರ
ಚುಕ್ಕೆ ಗುರುತಿಲ್ಲದ ಪ್ರ.ಸಂ. 1628 ರ. ಅನುಬಂಧ-2

**ಮೀನುಗಾರಿಕೆ ಇಲಾಖೆಯ ಫಲಾನುಭವಿ ಆಧಾರಿತ ಯೋಜನೆಗಳು ಮತ್ತು ಮಾನದಂಡಗಳು**

| ಕ್ರಮ ಸಂಖ್ಯೆ | ಯೋಜನೆ ಹೆಸರು/ವಿವರಗಳು | ಮಾನದಂಡಗಳು |
|---|---|---|
| 1 | **ಮೀನುಮರಿಗಳ ಖರೀದಿಗೆ ಸಹಾಯಧನ:**<br>ಸರ್ಕಾರಿ ಸ್ವಾಮ್ಯದ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳಿಂದ ಖರೀದಿಸಿದ ಎಲ್ಲಾ ತಳಿಗಳ ಮೀನು ಮರಿ ಬೆಲೆಯ ಶೇ.50 ರಷ್ಟು ಅಂದರೆ ವ್ಯಕ್ತಿಗತ ಗರಿಷ್ಠ ರೂ.5,000/- ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ.20,000/-ಗಳಿಗೆ ಮಿತಿಗೊಳಪಟ್ಟು ಸಹಾಯಧನವನ್ನು ನೀಡಲಾಗುವುದು. ಮೀನುಗಾರಿಕೆ ಇಲಾಖೆಯಿಂದ ನೋಂದಾಯಿಸಿಕೊಂಡು ಸ್ವಂತ ಕೊಳಗಳಲ್ಲಿ ಮೀನುಮರಿ ಪಾಲನೆ ಕೈಗೊಳ್ಳಲು ಮೀನು ಕೃಷಿಕರಿಗೆ ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ 50 ಲಕ್ಷ ಸ್ಪಾನ್ ಅಥವಾ 10 ಲಕ್ಷ ಫ್ರೈ ಖರೀದಿಸಲು ಶೇ. 50 ರಷ್ಟು ಗರಿಷ್ಠ ರೂ.25,000 ಗಳ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ | 1) ಕೆರೆ/ನದಿ/ಜಲಾಶಯಗಳಲ್ಲಿ ಮೀನು ಹಿಡಿಯುವ ವೃತ್ತಿಪರ ಮೀನುಗಾರರಾಗಿರಬೇಕು.<br>2) ಮೀನುಗಾರಿಕೆ ಸಹಕಾರಿ ಸಂಘಗಳಲ್ಲಿ ಸದಸ್ಯತ್ವ ಹೊಂದಿದವರಿಗೆ ಮೊದಲ ಆದ್ಯತೆ ನೀಡಲಾಗುವುದು.<br>3) ಇಲಾಖೆ/ಗ್ರಾಮ ಪಂಚಾಯತಿ ಕೆರೆಗಳನ್ನು ಗುತ್ತಿಗೆ/ಇ - ಟೆಂಡರ್ ಪಡೆದಿರಬೇಕು (ಸಂಘ/ವ್ಯಕ್ತಿ) |
| 2 | **ಸೀಗಡಿ ಮತ್ತು ಹಿನ್ನೀರು ಮೀನು ಕೃಷಿಗೆ ಪ್ರೋತ್ಸಾಹ** :<br>ರಾಜ್ಯದಲ್ಲಿ ಲಭ್ಯವಿರುವ ಒಳನಾಡು ಹಾಗೂ ಹಿನ್ನೀರು ಜಲಸಂಪನ್ಮೂಲಗಳಲ್ಲಿ ಸೀಗಡಿ ಮತ್ತು ಹಿನ್ನೀರು ಮೀನು ಕೃಷಿಯನ್ನು ಪ್ರೋತ್ಸಾಹಿಸಲು ಪ್ರತಿ ಹೆಕ್ಟೇರ್ ಜಲ ವಿಸ್ತೀರ್ಣಕ್ಕೆ ರೂ. 1.00 ಲಕ್ಷ ಗಳ ಘಟಕ ವೆಚ್ಚಕ್ಕೆ ಶೇ.50 ರಷ್ಟು ಸಹಾಯಧನ ನೀಡಲಾಗುವುದು. | 1) ಕೆರೆ/ನದಿ/ಜಲಾಶಯಗಳಲ್ಲಿ ಮೀನು ಹಿಡಿಯುವ ವೃತ್ತಿಪರ ಮೀನುಗಾರರಾಗಿರಬೇಕು.<br>2) ಮೀನುಗಾರಿಕೆ ಸಹಕಾರಿ ಸಂಘಗಳಲ್ಲಿ ಸದಸ್ಯತ್ವ ಹೊಂದಿದವರಿಗೆ ಮೊದಲ ಆದ್ಯತೆ ನೀಡಲಾಗುವುದು.<br>3) ಇಲಾಖೆ/ಗ್ರಾಮ ಪಂಚಾಯತಿ ಕೆರೆಗಳನ್ನು ಗುತ್ತಿಗೆ/ಇ - ಟೆಂಡರ್ ಪಡೆದಿರಬೇಕು (ಸಂಘ/ವ್ಯಕ್ತಿ) |
| 3 | **ಕೆರೆ/ಜಲಾಶಯದ ಅಂಚಿನಲ್ಲಿ ಮೀನು ಕೊಳ ನಿರ್ಮಾಣಕ್ಕೆ ಸಹಾಯ:**<br>ಕೆರೆ/ಜಲಾಶಯದ ಅಂಚಿನಲ್ಲಿ ನಿರ್ಮಿಸಿರುವ ಮೀನುಮರಿ ಪಾಲನಾ ಕೊಳಗಳಲ್ಲಿ ಮೀನುಮರಿಗಳನ್ನು ಸಾಕಾಣಿಕೆ ಮಾಡಲು ಪ್ರತಿ ಹೆಕ್ಟರ್ ಜಲ ವಿಸ್ತೀರ್ಣಕ್ಕೆ ರೂ.2.50 ಲಕ್ಷ ಸಹಾಯಧನ ನೀಡಲಾಗುವುದು. | 1) ಕೆರೆ/ನದಿ/ಜಲಾಶಯಗಳಲ್ಲಿ ಮೀನು ಹಿಡಿಯುವ ವೃತ್ತಿಪರ ಮೀನುಗಾರರಾಗಿರಬೇಕು.<br>2) ಮೀನುಗಾರಿಕೆ ಸಹಕಾರಿ ಸಂಘಗಳಲ್ಲಿ ಸದಸ್ಯತ್ವ ಹೊಂದಿದವರಿಗೆ ಮೊದಲ ಆದ್ಯತೆ ನೀಡಲಾಗುವುದು.<br>3) ಇಲಾಖೆ/ಗ್ರಾಮ ಪಂಚಾಯತಿ ಕೆರೆಗಳನ್ನು ಗುತ್ತಿಗೆ /ಇ - ಟೆಂಡರ್ ಪಡೆದಿರಬೇಕು (ಸಂಘ/ವ್ಯಕ್ತಿ) |

| | | |
|---|---|---|
| 4 | **ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ:**<br>01. ಕರಾವಳಿ ಮತ್ತು ಒಳನಾಡಿನಲ್ಲಿ ಸಾಂಪ್ರದಾಯಿಕ ಮೀನುಗಾರರಿಗೆ ಮೀನು ಹಿಡುವಳಿಗೆ ಬೇಕಾದ ಬಲೆ, ಮತ್ತು ಪೂರಕ ಸಾಮಗ್ರಿಗಳನ್ನು ಕಿಟ್ಟು ರೂಪದಲ್ಲಿ ಖರೀದಿಸಲು ಅವಕಾಶ ಮಾಡಲಾಗಿದೆ. ಈ ಯೋಜನೆಯ ಘಟಕ ವೆಚ್ಚ ಗರಿಷ್ಠ ರೂ.10,000/- ಗಳಾಗಿದ್ದು, ಶೇ.100 ರಷ್ಟು ಸಹಾಯಧನ ನೀಡಲು ಅವಕಾಶ ಮಾಡಲಾಗಿದೆ.<br>02. ರಾಜ್ಯದ ಎಲ್ಲಾ ಒಳನಾಡು ಜಿಲ್ಲೆಗಳ ಕೆರೆ, ಜಲಾಶಯ ಹಾಗೂ ನದಿಭಾಗಗಳಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರರಿಗೆ ಸದ್ರಿ ಯೋಜನೆಯಡಿ ಒಂದು ಫೈಬರ್ ಗ್ಲಾಸ್ ಹರಿಗೋಲು ಹಾಗೂ ಎರಡು ಹುಟ್ಟುಗಳನ್ನು ಖರೀದಿಸಲು ಅವಕಾಶ ಮಾಡಲಾಗಿದೆ. ಇದರ ಘಟಕ ವೆಚ್ಚ ರೂ.10,000/-ಗಳಾಗಿದ್ದು ಶೇ.100 ರಷ್ಟು ಸಹಾಯಧನ ನೀಡಲಾಗುವುದು. | 1) ಕೆರೆ/ನದಿ/ಜಲಾಶಯಗಳಲ್ಲಿ ಮೀನು ಹಿಡಿಯುವ ವೃತ್ತಿಪರ ಮೀನುಗಾರರಾಗಿರಬೇಕು.<br>2) ಮೀನುಗಾರಿಕೆ ಸಹಕಾರಿ ಸಂಘಗಳಲ್ಲಿ ಸದಸ್ಯತ್ವ ಹೊಂದಿದವರಿಗೆ ಮೊದಲ ಆದ್ಯತೆ ನೀಡಲಾಗುವುದು.<br>3) ಇಲಾಖೆ/ಗ್ರಾಮ ಪಂಚಾಯತಿ ಕೆರೆಗಳನ್ನು ಗುತ್ತಿಗೆ /ಇ - ಟೆಂಡರ್ ಪಡೆದಿರಬೇಕು (ಸಂಘ/ವ್ಯಕ್ತಿ) |
| 5 | **ಜಲಾಶಯಗಳಲ್ಲಿ ಮೀನು ಮರಿ ಬಿತ್ತನೆ:**<br>ರಾಜ್ಯದ ಆಯ್ದ ಜಲಾಶಯಗಳಲ್ಲಿ ಬೆರಳುದ್ದದ ಮೀನುಮರಿಗಳನ್ನು ಬಿತ್ತನೆ ಮಾಡುವ ಮೂಲಕ ಮೀನುಗಾರಿಕೆ ಅಭಿವೃದ್ಧಿ ಕೈಗೊಳ್ಳುವುದು. ಅಗತ್ಯವಾದ ಬೆರಳುದ್ದದ ಮೀನುಮರಿಗಳನ್ನು ನೊಂದಾಯಿತ ಮೀನುಮರಿ ಸಾಕಾಣಿಕೆದಾರರಿಂದ ಸರ್ಕಾರವು ನಿಗದಿಪಡಿಸಿದ ದರದಲ್ಲಿ ಖರೀದಿಸಲಾಗುತ್ತಿದೆ. | 1) ಕೆರೆ/ನದಿ/ಜಲಾಶಯಗಳಲ್ಲಿ ಮೀನು ಹಿಡಿಯುವ ವೃತ್ತಿಪರ ಮೀನುಗಾರರಾಗಿರಬೇಕು.<br>2) ಮೀನುಗಾರಿಕೆ ಸಹಕಾರಿ ಸಂಘಗಳಲ್ಲಿ ಸದಸ್ಯತ್ವ ಹೊಂದಿದವರಿಗೆ ಮೊದಲ ಆದ್ಯತೆ ನೀಡಲಾಗುವುದು.<br>3) ಇಲಾಖೆ/ಗ್ರಾಮ ಪಂಚಾಯತಿ ಕೆರೆಗಳನ್ನು ಗುತ್ತಿಗೆ/ಇ - ಟೆಂಡರ್ ಪಡೆದಿರಬೇಕು (ಸಂಘ/ವ್ಯಕ್ತಿ) |
| 6 | **ಮಂಜುಗಡ್ಡೆ ಸ್ಥಾವರ ಉಪಯೋಗಿಸುವ ವಿದ್ಯುತ್ ಮೇಲೆ ಸಹಾಯಧನ:** ಈ ಯೋಜನೆಯಡಿ ಮಂಜುಗಡ್ಡೆ ಘಟಕಗಳು ಉಪಯೋಗಿಸಿದ ವಿದ್ಯುತ್ ಪ್ರತಿ ಯೂನಿಟ್‌ಗೆ ರೂ.1.75 ರಂತೆ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಪ್ರತಿ ಘಟಕಕ್ಕೆ ವಾರ್ಷಿಕ ಗರಿಷ್ಠ ರೂ.3.50 ಲಕ್ಷ ಸಹಾಯಧನ ನೀಡಲಾಗುವುದು. | 1) ಕರಾವಳಿಯಲ್ಲಿರುವ ಮಂಜುಗಡ್ಡೆ ಮತ್ತು ಶೈತ್ಯಾಗಾರ ಘಟಕಗಳಿಗೆ ಅನ್ವಯಿಸುತ್ತದೆ. |

| | | |
|---|---|---|
| 7 | **ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿಕೊಡುವುದು:** 01. ಮೀನುಗಾರರು ಮೀನುಗಾರಿಕೆ ಚಟುವಟಿಕೆಗಳಿಗೆ ವಾಣಿಜ್ಯ ಬ್ಯಾಂಕುಗಳಿಂದ ಅಲ್ಪಾವಧಿ ಸಾಲ ತೆಗೆದುಕೊಂಡು ಕೈಗೊಳ್ಳಲು ಅನುಕೂಲವಾಗುವಂತೆ ವ್ಯತ್ಯಾಸದ ಬಡ್ಡಿಯನ್ನು ತುಂಬಿಕೊಡಲು ಈ ಯೋಜನೆಯಡಿ ಅವಕಾಶಕಲ್ಪಿಸಲಾಗಿದೆ. ಮೀನುಗಾರರು ರೂ.50,000/- ಗಳವರೆಗೆ ಸಾಲ ಪಡೆಯಲು ಅವಕಾಶವಿರುತ್ತದೆ.<br>02. ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಮಹಿಳಾ ಮೀನುಗಾರರಿಗೆ 50,000/- ರೂ. ಗಳ ವರೆಗೆ ಶೇ.2ರ ಬಡ್ಡಿ ದರದಲ್ಲಿ ವಾಣಿಜ್ಯ / ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ನೀಡುತ್ತಿರುವ ಸಾಲವನ್ನು 2018-19 ನೇ ಸಾಲಿನಿಂದ ಶೂನ್ಯ ಬಡ್ಡಿ ದರದಲ್ಲಿ ನೀಡಲಾಗುತ್ತಿದೆ. 2023-24 ನೇ ಸಾಲಿನಿಂದ ಸದರಿ ಯೋಜನೆಯಡಿ ಸಾಲದ ಮಿತಿಯನ್ನು ರೂ.50,000/- ಗಳಿಂದ ರೂ.3,00,000/-ಗಳವರೆಗೆ ಹೆಚ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. | 1) ಕೆರೆ/ನದಿ/ಜಲಾಶಯಗಳಲ್ಲಿ ಮೀನು ಹಿಡಿಯುವ ವೃತ್ತಿಪರ ಮೀನುಗಾರರಾಗಿರಬೇಕು.<br>2) ಮೀನುಗಾರಿಕೆ ಸಹಕಾರಿ ಸಂಘಗಳಲ್ಲಿ ಸದಸ್ಯತ್ವ ಹೊಂದಿದವರಿಗೆ ಮೊದಲ ಆದ್ಯತೆ ನೀಡಲಾಗುವುದು.<br>3) ಇಲಾಖೆ/ಗ್ರಾಮ ಪಂಚಾಯತಿ ಕೆರೆಗಳನ್ನು ಗುತ್ತಿಗೆ/ಇ - ಟೆಂಡರ್ ಪಡೆದಿರಬೇಕು (ಸಂಘ/ವ್ಯಕ್ತಿ)<br>4) ಬ್ಯಾಂಕ್‌ನಿಂದ ಸಾಲ ಪಡೆದಿರುವ ಬಗ್ಗೆ ದಾಖಲೆಗಳನ್ನು ಒದಗಿಸಬೇಕು. |
| 8 | **ಪರಿಶಿಷ್ಟ ಜಾತಿ ಉಪ ಯೋಜನೆ/ ಗಿರಿಜನ ಉಪ ಯೋಜನೆ:** 2025-26 ನೇ ಸಾಲಿನ ಆಯವ್ಯಯ ಘೋಷಣೆಯ ಕಂಡಿಕೆ 71 ರಂತೆ ಈ ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಯ್ದ ಮೀನು ಮಾರಾಟಗಾರರಿಗೆ ನಾಲ್ಕು ಚಕ್ರ ವಾಹನ ಖರೀದಿಸಲು ಶೇ.50 ರಷ್ಟು ಅಥವಾ ಗರಿಷ್ಠ ರೂ.3.00 ಲಕ್ಷ ಆರ್ಥಿಕ ನೆರವು ನೀಡಲಾಗುವುದು. | 1) ಮೀನು ಮಾರಾಟ ವೃತ್ತಿಯಲ್ಲಿ, ಹಿಡುವಳಿಯಲ್ಲಿ ಅನುಭವವಿರಬೇಕು.<br>2) ವೃತ್ತಿಪರ ಮೀನುಗಾರರಾಗಿರಬೇಕು.<br>3) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮೀನುಗಾರ ರಾಗಿರಬೇಕು. (ಜಾತಿ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು) |

| | | |
|---|---|---|
| 9 | **ಸಂಕಷ್ಟ ಪರಿಹಾರ ನಿಧಿಗೆ ಅಂಶದಾನಗಳು:**<br>**01. ಮರಣ ಪ್ರಕರಣ:** ಮೀನುಗಾರಿಕೆಯಲ್ಲಿ ಮತ್ತು ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವಾಗ ಮರಣ ಹೊಂದಿದ ಪ್ರಕರಣಗಳಿಗೆ ಹಾಗೂ ಮೀನುಗಾರಿಕೆಯಲ್ಲಿ ತೊಡಗಿದಾಗ ಅನಾರೋಗ್ಯದಿಂದ ಮೃತಪಟ್ಟ ಪ್ರಕರಣಗಳಿಗೆ ರೂ.10.00 ಲಕ್ಷ ಪರಿಹಾರ ನೀಡಲಾಗುವುದು.<br>**02.ಅಂಗವಿಕಲತೆ:** ಮೀನುಗಾರಿಕೆಯಲ್ಲಿ ತೊಡಗಿರುವಾಗ ಮತ್ತು ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವಾಗ ಅಪಘಾತ ಸಂಭವಿಸಿ ಮೀನುಗಾರರು ಶಾಶ್ವತ ಅಂಗವಿಕಲರಾದಲ್ಲಿ ರೂ.4.00 ಲಕ್ಷ ಹಾಗೂ ಭಾಗಶ: ಅಂಗವಿಕಲರಾದಲ್ಲಿ ರೂ.2.00 ಲಕ್ಷ ಪರಿಹಾರ ನೀಡಲಾಗುವುದು. **03.ವೈದ್ಯಕೀಯ ವೆಚ್ಚ:** ಮೀನುಗಾರಿಕೆಯಲ್ಲಿ ಅಥವಾ ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವಾಗ ಅಪಘಾತ ಸಂಭವಿಸಿ ವೈದ್ಯಕೀಯ ಶುಶ್ರೂಷೆಗಾಗಿ ಮಾಡಿದ ವೆಚ್ಚದ ಶೇ.50 ರಷ್ಟು ಅಥವಾ ಗರಿಷ್ಟ ರೂ.3.00 ಲಕ್ಷಗಳ ಮಿತಿಗೊಳಪಟ್ಟು ಪರಿಹಾರ ನೀಡಲಾಗುವುದು. 04.**ದೋಣಿ/ಬಲೆ/ಮೀನುಗಾರಿಕೆ ಸಲಕರಣೆಗಳ ಸ್ವತ್ತು ಹಾನಿ:** ಪ್ರಾಕೃತಿಕ ವಿಕೋಪದಿಂದಾದ ನಾಡದೋಣಿ/ ಮೋಟರೀಕೃತ /ಯಾಂತ್ರೀಕೃತ ದೋಣಿಗಳ ಹಾನಿಗೆ ಹಾಗೂ ಬಲೆ ಇನ್ನಿತರ ಸ್ವತ್ತು ಹಾನಿಗೆ ಅವುಗಳ ಖರೀದಿ/ದುರಸ್ತಿ ಮೌಲ್ಯದ ಶೇ.50 ರಷ್ಟು ಮೌಲ್ಯವನ್ನು ಅಥವಾ ಗರಿಷ್ಟ ರೂ.10.00 ಲಕ್ಷಗಳಿಗೆ ಒಳಪಟ್ಟು ಪರಿಹಾರವಾಗಿ ನೀಡಲಾಗುವುದು. | 1) ಕೆರೆ/ನದಿ/ಜಲಾಶಯಗಳಲ್ಲಿ ಮೀನು ಹಿಡಿಯುವ ವೃತ್ತಿಪರ ಮೀನುಗಾರರಾಗಿರಬೇಕು<br>2) ಮೀನುಗಾರಿಕೆಯಲ್ಲಿ ಮತ್ತು ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವಾಗ ಮರಣ ಹೊಂದಿರಬೇಕು./ಅಪಘಾತ ಸಂಭವಿಸಿ ಮೀನುಗಾರರು ಶಾಶ್ವತ ಅಂಗವಿಕಲರಾಗಿರಬೇಕು/ಅನಾರೋಗ್ಯಕ್ಕೆ ತುತ್ತಾಗಿರಬೇಕು. 3) ಪ್ರಾಕೃತಿಕ ವಿಕೋಪದಿಂದಾದ ನಾಡದೋಣಿ/ ಮೋಟರೀಕೃತ /ಯಾಂತ್ರೀಕೃತ ದೋಣಿಗಳು ಹಾಗೂ ಬಲೆ ಇನ್ನಿತರ ಸ್ವತ್ತು ಹಾನಿಗೊಳಗಾಗಿರಬೇಕು. |
| 10 | **ಸಾಂಪ್ರದಾಯಿಕ ದೋಣಿಗಳಿಗೆ ಸೀಮೆಎಣ್ಣೆ ಸರಬರಾಜು:**<br>ಕರಾವಳಿಯ 3 ಜಿಲ್ಲೆಗಳಲ್ಲಿನ ಮೋಟರೀಕೃತ ದೋಣಿಗಳಿಗೆ ಪಡಿತರ ದರದಲ್ಲಿ 300 ಲೀಟರ್ ಸೀಮೆಎಣ್ಣೆಯನ್ನು ಸರಬರಾಜು ಮಾಡಲು ಅವಕಾಶ ಕಲ್ಪಿಸಲಾಗಿದೆ ಹಾಗೂ ರೂ.35/- ರಿಯಾಯತಿ ದರದಲ್ಲಿ ಕೈಗಾರಿಕಾ ಸೀಮೆಎಣ್ಣೆಯನ್ನು ನಿರಂತರವಾಗಿ ಪೂರೈಸಲು ಕ್ರಮ ಕೈಗೊಳ್ಳಲಾಗಿದೆ. | 1) ನಾಡದೋಣಿ ಹೊಂದಿದ್ದು, ಮೀನುಗಾರಿಕೆ ಇಲಾಖೆಯಡಿ ನೊಂದಣಿಯಾಗಿರತಕ್ಕದ್ದು. 2) ಮೀನುಗಾರಿಕೆ ಇಲಾಖೆಯ ಲೈಸನ್ಸ್ ಮತ್ತು ಪರ್ಮಿಟ್ ಪಡೆದಿರತಕ್ಕದ್ದು. |
| 11 | **ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ ರಾಜ್ಯ ಮಾರಾಟ ಕರ ರಹಿತ ಡೀಸಲ್ ವಿತರಣೆ :**<br>ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ ರಾಜ್ಯ ಮಾರಾಟ ಕರ ರಹಿತ ಡೀಸೇಲ್ ವಿತರಿಸಲಾಗುತ್ತಿದ್ದು, ಸದರಿ ದೋಣಿಗಳಿಗೆ ನೀಡುತ್ತಿರುವ ಡೀಸೆಲ್ ಮಿತಿಯನ್ನು 2.00 ಲಕ್ಷ ಕಿಲೋ ಲೀಟರ್‌ಗೆ ಹೆಚ್ಚಿಸಲಾಗಿದೆ. | 1) ಮೀನುಗಾರಿಕೆ ಇಲಾಖೆಯಡಿ ನೊಂದಣಿಯಾಗಿರುವ ಯಾಂತ್ರೀಕೃತ ದೋಣಿಯಾಗಿರತಕ್ಕದ್ದು. 2) ಮೀನುಗಾರಿಕೆ ಇಲಾಖೆಯ ಪಾಸ್‌ಬುಕ್ ಮತ್ತು ಲೈಸನ್ಸ್ ಪಡೆದಿರತಕ್ಕದ್ದು. |
| 12 | **ಮತ್ಸ್ಯಾಶ್ರಯ ಯೋಜನೆ:**<br>"ಮತ್ಸ್ಯಾಶ್ರಯ ಯೋಜನೆ"ಯಡಿ ವಸತಿ ರಹಿತ ಮೀನುಗಾರರು ಅಥವಾ ವಾಸಿಸಲು ಯೋಗ್ಯ ಮನೆ ಇಲ್ಲದ ಮೀನುಗಾರರಿಗೆ ವಸತಿ ಸೌಲಭ್ಯ ಕಲ್ಪಿಸಲಾಗುವುದು. | 1) ಹುಟ್ಟು/ವೃತ್ತಿಯಲ್ಲಿ ಮೀನುಗಾರರಾಗಿರಬೇಕು, 2) ವಸತಿ ರಹಿತರಾಗಿರಬೇಕು.<br>3) ಸ್ವಂತ ನಿವೇಶನ ಹೊಂದಿರಬೇಕು.<br>4) ಮತ್ಸ್ಯಾಶ್ರಯ ಯೋಜನೆಯ ಫಲಾನುಭವಿಗಳನ್ನು ಮಾನ್ಯ ಶಾಸಕರ ಅಧ್ಯಕ್ಷತೆಯ ಆಯ್ಕೆ ಸಮಿತಿ ಸಭೆಯಲ್ಲಿ ಆಯ್ಕೆ ಮಾಡಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. |

| | | |
|---|---|---|
| 13 | **ಕಡಲ ಮೀನುಗಾರರಿಗೆ ಉಳಿತಾಯ ಮತ್ತು ಪರಿಹಾರ ಯೋಜನೆ:** ಉಳಿತಾಯ ಹಾಗೂ ಪರಿಹಾರ ಯೋಜನೆಯಡಿ ಕರಾವಳಿ ಮೀನುಗಾರರಿಂದ ರೂ.1500/- ಗಳನ್ನು ಮೀನುಗಾರಿಕೆ ಅವಧಿಯಲ್ಲಿ ವಸೂಲಿ ಮಾಡಿ ಈ ಮೊತ್ತಕ್ಕೆ ಕೇಂದ್ರ ಸರ್ಕಾರ ರೂ.1500/- ಮತ್ತು ರಾಜ್ಯ ಸರ್ಕಾರ ರೂ.1500/- ಸೇರಿಸಿ ಹೀಗೆ ಒಟ್ಟು ರೂ. 4500/- ಗಳನ್ನು ಮೀನುಗಾರಿಕೆ ನಿಷೇಧದ ಅವಧಿಯಲ್ಲಿ ಮೀನುಗಾರರಿಗೆ ನೀಡಲಾಗುತ್ತಿತ್ತು.<br>2024-25 ನೇ ಸಾಲಿನಿಂದ "ಮತ್ಸ್ಯ ಆಶಾಕಿರಣ ಯೋಜನೆ" ಯಡಿ ಮೀನುಗಾರಿಕೆ ನಿಷೇಧದ ಅವಧಿಯಲ್ಲಿ ಕರಾವಳಿಯ ಮೀನುಗಾರರಿಗೆ ನೀಡುತ್ತಿರುವ ಪರಿಹಾರ ಮೊತ್ತದ ರಾಜ್ಯದ ಪಾಲನ್ನು 1,500 ರೂ. ಗಳಿಂದ 3,000 ರೂ. ಗಳಿಗೆ ಹೆಚ್ಚಿಸಲಾಗಿದೆ." ಆದ್ದರಿಂದ ಪ್ರಸ್ತುತವಾಗಿ, ಫಲಾನುಭವಿಯ ಪಾಲು ರೂ 1500/-, ಕೇಂದ್ರ ಸರ್ಕಾರದ ಪಾಲು ರೂ.1500/-, ರಾಜ್ಯ ಸರ್ಕಾರದ ಪಾಲು ರೂ.3000/- ಸೇರಿಸಿ ಹೀಗೆ ಒಟ್ಟು ರೂ.6000/- ಗಳನ್ನು ಮೀನುಗಾರಿಕೆ ನಿಷೇಧದ ಅವಧಿಯಲ್ಲಿ ಮೀನುಗಾರರಿಗೆ ನೀಡಲಾಗುತ್ತಿದೆ. | 1) ಕರಾವಳಿ ಮೀನುಗಾರರಿಗೆ ಅನ್ವಯಿಸುತ್ತದೆ.<br>2) ಮೀನುಗಾರರು 9 ತಿಂಗಳಅವಧಿಯಲ್ಲಿ ತಮ್ಮ ವಂತಿಗೆ ಮೊತ್ತ ರೂ.1500/-ಗಳನ್ನು ಪಾವತಿಸತಕ್ಕದ್ದು. |
| 14 | **ಸಾಮೂಹಿಕ ವಿಮಾ ಯೋಜನೆ:**<br>ರಾಜ್ಯದ 80,099 ಮೀನುಗಾರರಿಗೆ ಗುಂಪು ವಿಮಾ ಸೌಲಭ್ಯ ಒದಗಿಸಲು ರಾಜ್ಯದ ವಿಮಾ ಕಂತನ್ನು ಪಾವತಿಸಲು ಅನುದಾನ ಒದಗಿಸಲಾಗಿದೆ. ಈ ಯೋಜನೆಯಡಿ ವಿಮಾ ಸೌಲಭ್ಯವನ್ನು ಮೀನುಗಾರಿಕೆಯಲ್ಲಿ ತೊಡಗಿರುವಾಗ ನೈಸರ್ಗಿಕ ವಿಕೋಪಗಳಿಂದ ಮರಣ ಹೊಂದಿದ ಮೀನುಗಾರರ ಅವಲಂಬಿತರಿಗೆ ಹಾಗೂ ಶಾಶ್ವತ ಅಂಗವಿಕಲರಾದ ಮೀನುಗಾರರಿಗೆ ರೂ.5,00,000/- ಗಳ ಪರಿಹಾರ ಮತ್ತು ಭಾಗಶಃ ಅಂಗವಿಕಲರಾದವರಿಗೆ ರೂ.1,00,000/- ಗಳ ಪರಿಹಾರ ನೀಡಲಾಗುವುದು. ವಿಮಾ ಕಂತಿನ ಹಣ ಪ್ರತಿ ವರ್ಷ ಹೈದರಾಬಾದ್‌ನಲ್ಲಿರುವ ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಲಾಗುತ್ತಿದೆ. | 1) ಕೆರೆ/ನದಿ/ಜಲಾಶಯಗಳಲ್ಲಿ ಮೀನು ಹಿಡಿಯುವ ವೃತ್ತಿಪರ ಮೀನುಗಾರರಾಗಿರಬೇಕು<br>2) ಮೀನುಗಾರಿಕೆಯಲ್ಲಿ ಮತ್ತು ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವಾಗ ಮರಣ ಹೊಂದಿರಬೇಕು./ಅಪಘಾತ ಸಂಭವಿಸಿ ಮೀನುಗಾರರು ಶಾಶ್ವತ ಅಂಗವಿಕಲರಾಗಿರಬೇಕು/ಅನಾರೋಗ್ಯಕ್ಕೆ ತುತ್ತಾಗಿರಬೇಕು.<br>2) ಪ್ರಾಕೃತಿಕ ವಿಕೋಪದಿಂದಾದ ನಾಡದೋಣಿ/ ಮೋಟರೀಕೃತ /ಯಾಂತ್ರೀಕೃತ ದೋಣಿಗಳು ಹಾಗೂ ಬಲೆ ಇನ್ನಿತರ ಸ್ವತ್ತು ಹಾನಿಗೊಳಗಾಗಿರಬೇಕು. |
| 15 | **"ವಿದ್ಯಾನಿಧಿ" ಯೋಜನೆ:**<br>ಕರ್ನಾಟಕ ರಾಜ್ಯದಲ್ಲಿ ಸುಮಾರು 10 ಲಕ್ಷ ಮೀನುಗಾರರಿದ್ದು, ಮೀನುಗಾರರು ಆರ್ಥಿಕವಾಗಿ ಹಿಂದುಳಿದವರಾಗಿರುತ್ತಾರೆ. ಸದರಿ ಮೀನುಗಾರ ರೈತ ಮಕ್ಕಳ ಹೆಚ್ಚಿನ ಹಾಗೂ ಉನ್ನತ ಶಿಕ್ಷಣ ಪ್ರೋತ್ಸಾಹಿಸಲು ಶಿಷ್ಯವೇತನ (Scholarship) ಯೋಜನೆ- "ವಿದ್ಯಾನಿಧಿ" ಯೋಜನೆಯನ್ನು ಅನುಷ್ಠಾನ ಗೊಳಿಸಲಾಗುತ್ತಿದೆ. | 1) ವೃತ್ತಿಪರ ಮೀನುಗಾರರ ಮಕ್ಕಳರಾಗಿರಬೇಕು. |

| | | |
|---|---|---|
| 16 | **ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ:**<br>ಈ ಯೋಜನೆಯಡಿ ಜೌಗು ಹಾಗೂ ಚೌಳು ಪ್ರದೇಶಗಳಲ್ಲಿ ಒಂದು ಎಕರೆ ಮೀನು ಕೃಷಿಕೊಳ ನಿರ್ಮಿಸಲು ಘಟಕ ವೆಚ್ಚದ ಶೇಕಡ 40 ರಷ್ಟು ಅಂದರೆ ಗರಿಷ್ಠ ರೂ.4,80,000/- ಸಹಾಯಧನವಾಗಿ ನೀಡಲಾಗುತ್ತದೆ.<br>ಒಂದು ಎಕರೆ ಸ್ವಂತ ಜಮೀನಿನಲ್ಲಿ ಮೀನುಕೃಷಿ ಕೊಳವನ್ನು ನಿರ್ಮಾಣ ಮಾಡಿ ಮೀನುಗಾರಿಕೆಯನ್ನು ತೆಗೆದುಕೊಳ್ಳಲು ಖಾಸಗಿ ವ್ಯಕ್ತಿಗಳಿಗೆ ಘಟಕ ವೆಚ್ಚದ ಶೇಕಡ 40 ರಷ್ಟು ಅಂದರೆ ಗರಿಷ್ಠ ರೂ.4,40,000/- ಸಹಾಯಧನವಾಗಿ ನೀಡಲಾಗುತ್ತದೆ. ಅಲ್ಲದೆ, ಹುಲ್ಲುಗೆಂಡೆ ಮೀನುಮರಿಗಳನ್ನು ಕೆರೆಗಳಲ್ಲಿ ಬಿತ್ತನೆ ಮಾಡಿದ ಕೃಷಿಕರಿಗೆ ಶೇಕಡ 50 ರಷ್ಟು ಗರಿಷ್ಠ ರೂ.10,000/- ಗಳಿಗೆ ಮೀರದಂತೆ ಸಹಾಯಧನವನ್ನು ನೀಡಲಾಗುವುದು ಹಾಗೂ ಬಾವಿ ಮತ್ತು ನೀರಾವರಿ ಕೊಂಡಗಳಲ್ಲಿ ಮೀನು ಕೃಷಿಗಾಗಿ 500 ಸಾಮಾನ್ಯ ಗೆಂಡೆ ಮರಿಗಳನ್ನು ಉಚಿತವಾಗಿ ಸರಬರಾಜು ಮಾಡಿ ಮೀನುಕೃಷಿಯನ್ನು ಪ್ರೋತ್ಸಾಹಿಸಲಾಗುವುದು.<br>ಈ ಯೋಜನೆಯಡಿ ಅನುದಾನವನ್ನುಮೀನುಗಾರಿಕೆ ಇಲಾಖೆಯ ಮೀನುಮರಿ ಕೇಂದ್ರದಲ್ಲಿ ಮೀನುಮರಿ ಉತ್ಪಾದನೆಗೆ, ತಾಲ್ಲೂಕು ಮಟ್ಟದ ನರ್ಸರಿಗಳಲ್ಲಿ, ಫಾರಂಗಳಲ್ಲಿ, ಕೇಜ್ ಮತ್ತು ಪೆನ್‌ಗಳಲ್ಲಿ ಮೀನುಮರಿ ಪಾಲನೆಗೆ, ಹಾಗೂ ನಿರ್ವಹಣೆಗೆ ತಗಲುವ ವೆಚ್ಚಗಳಿಗೆ, ಮೀನುಮರಿ ಖರೀದಿ ಮತ್ತು ಸಾಗಾಣಿಕೆಗೆ, ವಾಹನಗಳ ಖರೀದಿ, ನಿರ್ವಹಣೆ ಮತ್ತು ಇತರ ಸಲಕರಣೆಗಳ ಖರೀದಿಗೆ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದೆ. | 1) ಕೆರೆ/ನದಿ/ಜಲಾಶಯಗಳಲ್ಲಿ ಮೀನು ಹಿಡಿಯುವ ವೃತ್ತಿಪರ ಮೀನುಗಾರರಾಗಿರಬೇಕು.<br>2) ಮೀನುಗಾರಿಕೆ ಸಹಕಾರಿ ಸಂಘಗಳಲ್ಲಿ ಸದಸ್ಯತ್ವ ಹೊಂದಿದವರಿಗೆ ಮೊದಲ ಆದ್ಯತೆ ನೀಡಲಾಗುವುದು.<br>3) ಸ್ವಂತ ಜಮೀನಿನಲ್ಲಿ ಬಾವಿ/ಕೃಷಿ ಹೊಂಡ ಹೊಂದಿರಬೇಕು.<br>4) ಮೀನು ಕೃಷಿಕರು ಸ್ವಂತ ಜಮೀನು ಅಥವಾ 10 ವರ್ಷಕ್ಕೆ ಗುತ್ತಿಗೆ ಪಡೆದ ಜಮೀನು ಹೊಂದಿರಬೇಕು. |

| | | |
|---|---|---|
| 17 | **ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನುಮಾರಾಟಕ್ಕೆ ಸಹಾಯ:**<br>ಮೀನುಗಾರರು ಮೀನನ್ನು ತಾಜಾ ಹಾಗೂ ಆರೋಗ್ಯಕರ ಸ್ಥಿತಿಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ಶಾಖನಿರೋಧಕ ಪೆಟ್ಟಿಗೆ ಮತ್ತು ಸೈಕಲ್ಲುಗಳನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ನೆರವಿನೊಂದಿಗೆ ಗರಿಷ್ಠ ರೂ.4,000/- ಸಹಾಯಧನವನ್ನು ಹಾಗೂ ದ್ವಿಚಕ್ರವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ ಖರೀದಿಸಲು ಘಟಕ ವೆಚ್ಚದ ಶೇ.25 ರಷ್ಟು ಹಾಗೂ ಗರಿಷ್ಠ ರೂ.30,000/- ಗಳ ಸಹಾಯಧನವನ್ನು ನೀಡಲಾಗುವುದು.<br>ತ್ರಿಚಕ್ರ ಟೆಂಪೋರಿಕ್ಷಾವನ್ನು ಖರೀದಿಸಲು ಘಟಕ ವೆಚ್ಚದ ಶೇ.25 ರಷ್ಟು ಹಾಗೂ ಗರಿಷ್ಠ ರೂ.1,20,000/- ಗಳ ಸಹಾಯಧನವನ್ನು ಹಾಗೂ ನಾಲ್ಕು ಚಕ್ರದ ಟೆಂಪೋರಿಕ್ಷಾವನ್ನು ಖರೀದಿಸಲು ಘಟಕ ವೆಚ್ಚದ ಶೇ.25 ರಷ್ಟು ಹಾಗೂ ಗರಿಷ್ಠ ರೂ.2,40,000/- ಗಳ ಸಹಾಯಧನವನ್ನು ನೀಡಲಾಗುವುದು.<br>ಇದಲ್ಲದೆ ಸದರಿ ಯೋಜನೆಯಡಿ ಸಾಂಪ್ರದಾಯಿಕ ಮೀನುಗಾರಿಕೆ ದೋಣಿ ಹೊಂದಿರುವ (ಪಾತಿ) ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಖರೀದಿಸಲು ಘಟಕ ವೆಚ್ಚದ ಪ್ರತಿಶತ 50 ರಷ್ಟು ಹಾಗೂ ಗರಿಷ್ಠ ರೂ.5000/- ಗಳನ್ನು ಸಹಾಯಧನವಾಗಿ ನೀಡಲು ಅವಕಾಶ ಕಲ್ಪಿಸಲಾಗಿದೆ. ಕೇಂದ್ರ ವಲಯ ಯೋಜನೆಗಳು | 1) ಮೀನು ಮಾರಾಟ ವೃತ್ತಿಯಲ್ಲಿ, ಹಿಡುವಳಿಯಲ್ಲಿ, ಅನುಭವವಿರಬೇಕು<br>2) ವೃತ್ತಿಪರ ಮೀನುಗಾರರಾಗಿರಬೇಕು.<br>3) ಮೀನುಗಾರಿಕೆ ಸಹಕಾರಿ ಸಂಘಗಳಲ್ಲಿ ಸದಸ್ಯತ್ವ ಹೊಂದಿದವರಿಗೆ ಮೊದಲ ಆದ್ಯತೆ ನೀಡಲಾಗುವುದು. |
| 18 | 1) ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ.<br>2) PMMSY ಯೋಜನೆಯಡಿ ಧರ್ತಿ ಆಬಾ ಜನ ಜಾತೀಯ ಗ್ರಾಮ ಉತ್ಕರ್ಷ ಅಭಿಯಾನ ಯೋಜನೆ. (DA-JUGA) | 1) ಮೀನು ಕೃಷಿ ಕೊಳ/RAS/Biofloc/Fish Kiosk/ಪಾಲನಾ ಕೊಳ ನಿರ್ಮಿಸಲು ಸಹಾಯಧನ ಪಡೆಯಲು ಮೀನು ಕೃಷಿಕರು ಸ್ವಂತ ಜಮೀನು ಹೊಂದಿರಬೇಕು.<br>2) ದ್ವಿ ಚಕ್ರ/ತ್ರಿ ಚಕ್ರ/ನಾಲ್ಕು ಚಕ್ರ/ಇನ್ಸುಲೇಟೆಡ್ ವಾಹನ ಖರೀದಿಗೆ ಸಹಾಯಧನ ಪಡೆಯಲು ಮೀನು ಮಾರಾಟ ವೃತ್ತಿಯಲ್ಲಿ ಅನುಭವವಿರಬೇಕು, ವೃತ್ತಿಪರ ಮೀನುಗಾರರಾಗಿರಬೇಕು.<br>ಈ ಯೋಜನೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಸಮಿತಿ ಸಭೆಯಲ್ಲಿ ಆಯ್ಕೆ ಮಾಡಿ ಅನುಮೋದನೆ ಪಡೆದು ಅನುಷ್ಠಾನಗೊಳಿಸಲಾಗುವುದು. |

ಮೀನುಗಾರಿಕೆ ನಿರ್ದೇಶಕರು